ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

೧೯೯೪-೯೫ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನು ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ ೨೦೫ನೇ (೧) (ಎ) ಅನುಚ್ಛೇದದ ಉಪ-ಬಂಧಗಳನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಂ. ವೀರಪ್ಪ ಮೊಯಿಲಿ
ಮುಖ್ಯ ಮಂತ್ರಿಗಳು.

ನಿಂ. ಹು. ಮುತ್ತಲಗೇರಿ,
ಕಾರ್ಯದರ್ಶಿ.

(೨) ೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ (ತೆರಿಗೆ) (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ (ತೆರಿಗೆ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವೇನೆಂದರೆ, ''೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೯೪ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ

ಅನುಬಂಧ-II

ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, ೧೯೯೪.

(೧೯೯೪ರ ವಿಧಾನ ಸಭಾ ವಿಧೇಯಕ ಸಂಖ್ಯೆ ೧೧)

ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವು, ೧೯೫೯ನ್ನು ಮತ್ತಷ್ಟು ತಿದ್ದುಪಡಿ ಮಾಡಲು ವಿಧೇಯಕ.

ಸರಕಾರಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವು, ೧೯೫೯ (೧೯೫೯ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೭) ನ್ನು ಇನ್ನಷ್ಟು ಮುಂದೆ ತಿಳಿಸಲಾದ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ ;

ಭಾರತ ಗಣರಾಜ್ಯದ ನಲವತ್ತೈದನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಿರಲಿ :—

೧. ಚಿಕ್ಕ ಹೆಸರು ಮತ್ತು ಪ್ರಾರಂಭ :—(೧) ಈ ಅಧಿನಿಯಮವನ್ನು, ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ಅಧಿನಿಯಮ, ೧೯೯೪ ಎಂದು ಕರೆಯತಕ್ಕದ್ದು.

(೨) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ದಿನಾಂಕದಿಂದ ಜಾರಿಯಲ್ಲಿ ಬರತಕ್ಕದ್ದು.

೨. ಹೊಸ ಅಧ್ಯಾಯ–II ಎ ಯ ಸೇರ್ಪಡೆ :—ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, ೧೯೫೭ (೧೯೫೭ರ ಕರ್ನಾಟಕ ಅಧಿನಿಯಮ ಸಂಖ್ಯೆ ೨೭) ರ II ನೇ ಅಧ್ಯಾಯದ ತರುವಾಯ ಈ ಮುಂದಿನ ಅಧ್ಯಾಯ ಮತ್ತು ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ ;—

"ಅಧ್ಯಾಯ–II–ಎ"

೪–ಎ (೧) ಪರಿಭಾಷೆಗಳು :— ಈ ಅಧ್ಯಾಯದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) "ಸಾಧನ ಸಲಕರಣೆಗಳು" ಎಂದರೆ ಒಂದು ಮೋಟಾರು ವಾಹನದಲ್ಲಿ ಅಳವಡಿಸಲಾದ ಮತ್ತು ಮೂಲ ಸರಕು ಪಟ್ಟಿಯಲ್ಲಿ ಸೇರಿಸಿಲ್ಲದ ಹವಾ ನಿಯಂತ್ರಕಗಳು, ಸಂಗೀತ ವ್ಯವಸ್ಥೆ ಮತ್ತು ಇತರ ಸಾಧನಗಳು :

(ಬಿ) "ರಾಜ್ಯದ ಹೊರಗಡೆಯಿಂದ ಸ್ಥಳೀಯ ಪ್ರದೇಶದೊಳಗೆ ಮೋಟಾರು ವಾಹನಗಳ ಪ್ರವೇಶ" ಎಂಬುದು ತನ್ನೆಲ್ಲ ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ತತ್ಸಂಬಂಧಿ ಅಭಿವ್ಯಕ್ತಿಗಳೊಂದಿಗೆ, ರಾಜ್ಯದ ಹೊರಗಡೆಯ ಯಾವುದೇ ಪ್ರದೇಶದಿಂದ ಸ್ಥಳೀಯ ಪ್ರದೇಶದೊಳಗೆ, ಅಲ್ಲಿ ಬಳಕೆ ಅಥವಾ ವಾರಾಟಕ್ಕಾಗಿ ಮೋಟಾರು ವಾಹನದ ಪ್ರವೇಶ ಎಂಬ ಅರ್ಥವನ್ನು ಹೊಂದಿರತಕ್ಕದ್ದು.

(ಸಿ) "ಆಮದುಗಾರ" ಎಂದರೆ ರಾಜ್ಯದ ಹೊರಗಡೆಯ ಯಾವುದೇ ಪ್ರದೇಶದಿಂದ ಒಂದು ಸ್ಥಳೀಯ ಪ್ರದೇಶದೊಳಗೆ ಅಲ್ಲಿ ಬಳಕೆ ಅಥವಾ ವಾರಾಟಕ್ಕಾಗಿ ಒಂದು ಮೋಟಾರು ವಾಹನವನ್ನು ತರಿಯುವ ಮತ್ತು ಒಂದು ಸ್ಥಳೀಯ ಪ್ರದೇಶದೊಳಗೆ ಆ ವಾಹನವು ಬಂದ ಸಮಯದಲ್ಲಿ ಅದರ ಒಡೆತನವನ್ನು ಹೊಂದಿರುವ ವ್ಯಕ್ತಿ ;

(ಡಿ) "ಮೋಟಾರು ವಾಹನ" ಎಂದರೆ ಮೋಟಾರು ವಾಹನಗಳ ಅಧಿನಿಯಮ, ೧೯೮೮ ರ ೨ನೇ ಪ್ರಕರಣದ (೨೮) ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಒಂದು ಮೋಟಾರು ವಾಹನ ;

(ಇ) "ವ್ಯಕ್ತಿ" ಎಂಬುದು ಯಾವುದೇ, ಕಂಪನಿ ಅಥವಾ ಸಂಘ ಅಥವಾ ನಿಗಮಿತವಾಗಿರುವ ಅಥವಾ ಆಗಿರದ ವ್ಯಕ್ತಿಗಳ ನಿಕಾಯ ಮತ್ತು ಒಂದು ಹಿಂದೂ ಅವಿಭಕ್ತ ಕುಟುಂಬ, ಒಂದು ಫರ್ಮ್, ಒಂದು ಸೊಸೈಟಿ, ಒಂದು ಕ್ಲಬ್, ಒಬ್ಬ ವ್ಯಕ್ತಿ, ಕೇಂದ್ರ ಸರ್ಕಾರ ಅಥವಾ ಇತರ ಯಾವುದೇ ರಾಜ್ಯ ಸರ್ಕಾರ, ಕೇಂದ್ರಾಡಳಿತ ಪ್ರದೇಶ ಅಥವಾ ಒಂದು ಸ್ಥಳೀಯ ಪ್ರಾಧಿಕಾರ ;

(ಎಫ್) "ಖರೀದಿ ಮೌಲ್ಯ" ಎಂದರೆ ಸರಕು ಪಟ್ಟಿಯಿಂದ ನಿಗದಿತಪಡಿಸಿಕೊಳ್ಳಲಾದಂತೆ ಮೋಟಾರು ವಾಹನದ ಮೌಲ್ಯ ಮತ್ತು ಇದರಲ್ಲಿ ವಾಹನಕ್ಕೆ ಅಳವಡಿಸಲಾದ ಸಲಕರಣೆಗಳ ಮೌಲ್ಯ, ವಿಮೆ, ಸರಕು ಸುಂಕ, ಪ್ರತಿಸುಂಕ, ವಾರಾಟ ತೆರಿಗೆ, ಸಾರಿಗೆ ಶುಲ್ಕ, ಸಾಗಣೆ ಬಾಡಿಗೆಯ ವೆಚ್ಚಗಳು ಮತ್ತು, ಮೋಟಾರು ವಾಹನದ ಖರೀದಿಯ ಮೇಲೆ ಅನುಸಂಗಿಕವಾಗಿ ವಿಧಿಸಲಾದ ಎಲ್ಲ ಇತರ ಶುಲ್ಕಗಳು ಸೇರುತ್ತವೆ.

ಪರಂತು, ಸರಕು ಪಟ್ಟಿ ದೊರಕದಿರುವ ಅಥವಾ ಅದನ್ನು ಸಲ್ಲಿಸದಿರುವ ಕಾರಣಕ್ಕಾಗಿ ಮೋಟಾರು ವಾಹನದ ಖರೀದಿ ಮೌಲ್ಯವನ್ನು ನಿಗದಿತಪಡಿಸಿಕೊಂಡಿರದಿದ್ದಲ್ಲಿ ಅಥವಾ ಸಲ್ಲಿಸಲಾದ ಸರಕು ಪಟ್ಟಿ ಸುಳ್ಳು ಎಂದು ರುಜುವಾತಾದಲ್ಲಿ ಅಥವಾ ಮೋಟಾರು ವಾಹನವನ್ನು ಖರೀದಿ ಮುಖಾಂತರ ವಲ್ಲದೆ ಅನ್ಯಥಾ ಆರ್ಜಿಸಲಾಗಿದ್ದರೆ ಅಥವಾ ಪಡೆಯಲಾಗಿದ್ದರೆ, ಖರೀದಿ ಮೌಲ್ಯವು ಮುಕ್ತ ಮಾರುಕಟ್ಟೆಯಲ್ಲಿ ಮಾರಲಾಗುತ್ತಿರುವ ಮೌಲ್ಯ ಅಥವಾ ಬೆಲೆಯಲ್ಲಿರತಕ್ಕದ್ದು,

(ಜಿ) ''ರಾಜ್ಯ'' ಎಂದರೆ ಕರ್ನಾಟಕ ರಾಜ್ಯ

೪–ಬಿ. ತೆರಿಗೆ ವಿಧಿಸುವುದು.—(೧) ಇನೇ ಪ್ರಕರಣದಲ್ಲಿ ಏನೇಇದ್ದರೂ, ಮೋಟಾರು ವಾಹನ ಅಧಿನಿಯಮ, ೧೯೫೮ರ ಅಡಿಯಲ್ಲಿ ಒಬ್ಬ ಆಮದುಗಾರನಿಂದ ನೋಂದಣಿಗೆ ಬದ್ಧವಾದ ಅಥವಾ ರಾಜ್ಯದಲ್ಲಿ ಒಂದು ಹೊಸ ನೋಂದಣಿಗಾಗಿ ಪರಿಚಯಿಸಿಕೊಡಲಾದ ಒಂದು ಸ್ಥಳೀಯ ಪ್ರದೇಶದೊಳಗೆ ಅಲ್ಲಿ ಬಳಕೆ ಅಥವಾ ಮಾರಾಟಕ್ಕಾಗಿ ಯಾವುದೇ ಮೋಟರು ವಾಹನದ ಪ್ರವೇಶದ ಮೇಲೆ ತೆರಿಗೆಯನ್ನು ವಿಧಿಸತಕ್ಕದು ಮತ್ತು ವಸೂಲು ಮಾಡತಕ್ಕದು.

(೨) ತೆರಿಗೆಯನ್ನು ಮೋಟರು ವಾಹನದ ಬಿರೀದಿ ಮೌಲ್ಯದ ಮೇಲೆ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದರದಲ್ಲಿ ವಿಧಿಸತಕ್ಕದ್ದು, ಆದರೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, ೧೯೫೭ರ ಅಡಿಯಲ್ಲಿ ಮೋಟಾರು ವಾಹನಗಳ ಸಂಬಂಧದಲ್ಲಿ ನಿರ್ದಿಷ್ಟಪಡಿಸಲಾದ ದರಗಳನ್ನು ಮೀರತಕ್ಕದಲ್ಲ :

ಪರಂತು, ಮೋಟಾರು ವಾಹನಗಳ ಅಧಿನಿಯಮ, ೧೯೫೮ರ ಅಡಿಯಲ್ಲಿ ಯಾವುದೇ ಕೇಂದ್ರಾಡಳಿತ ಪ್ರದೇಶ ಅಥವಾ ಯಾವುದೇ ಇತರ ರಾಜ್ಯದಲ್ಲಿ ನೋಂದಾಯಿಸಲಾದ ಮೋಟಾರು ವಾಹನದ ಸಂಬಂಧದಲ್ಲಿ, ಸದರಿ ಅಧಿನಿಯಮದ ಅಡಿಯಲ್ಲಿ ರಾಜ್ಯದಲ್ಲಿ ಅದು ಯಾವ ದಿನಾಂಕದಂದು ನೋಂದಣಿಯಾಯಿತೋ ಆ ದಿನಾಂಕಕ್ಕೆ ಮುಂಚೆ ಹದಿನೈದು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ತೆರಿಗೆ ವಿಧಿಸತಕ್ಕದಲ್ಲ ಮತ್ತು ವಸೂಲು ಮಾಡತಕ್ಕದಲ್ಲ.

(೩) ಈ ಪ್ರಕರಣದ ಅಡಿಯಲ್ಲಿ ವಿಧಿಸಲಾದ ತೆರಿಗೆಯನ್ನು ಆಮದುದಾರನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗಾಗಿ ಸಂದಾಯ ಮಾಡತಕ್ಕದ್ದು.

೪. ತೆರಿಗೆ ಮತ್ತು ಜುಲ್ಮಾನೆಗಳನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.— ಆ ಅಧಿನಿಯಮದ ಉಪಬಂಧಗಳು, ಅವು ತೆರಿಗೆ ಪ್ರಾಧಿಕಾರಿಗಳು, ನೋಂದಣಿ, ವಿವರಪಟ್ಟಿಕೆಗಳ ಸಲ್ಲಿಕೆ, ನಿರ್ಧರಣೆಗಳು, ಮರುನಿರ್ಧರಣೆಗಳು, ಜುಲ್ಮಾನೆಗಳನ್ನು ವಿಧಿಸುವುದು, ತೆರಿಗೆ ಮತ್ತು ಜುಲ್ಮಾನೆಗಳ ಸಂಗ್ರಹ ಮತ್ತು ವಸೂಲಿ, ಅಪೀಲುಗಳು, ಪರಿಷ್ಕರಣೆ, ಅಪರಾಧಗಳು ಮತ್ತು ಅಭಿಯೋಗಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಅಧ್ಯಾಯದ ಅಡಿಯಲ್ಲಿ ಸ್ಥಳೀಯ ಪ್ರದೇಶದೊಳಗೆ ಅಲ್ಲಿ ಬಳಕೆ ಅಥವಾ ಮಾರಾಟಕ್ಕಾಗಿ ಮೋಟಾರು ವಾಹನದ ಪ್ರವೇಶದ ಮೇಲೆ ತೆರಿಗೆ ವಿಧಿಸುವುದಕ್ಕೆ ಅನ್ವಯವಾಗತಕ್ಕದ್ದು.

ಪರಂತು, ಈ ಅಧಿನಿಯಮದ ಅಡಿಯಲ್ಲಿ ನೋಂದಣಿಗೆ ಬದ್ಧನಾದ ವ್ಯಾಪಾರಿಯಲ್ಲದ ಒಬ್ಬ ಆಮದುದಾರನ ಸಂದರ್ಭದಲ್ಲಿ ಸ್ಥಳೀಯ ಪ್ರದೇಶದೊಳಗೆ, ಅಲ್ಲಿ ಬಳಕೆ ಅಥವಾ ಮಾರಾಟಕ್ಕಾಗಿ ಮೋಟಾರು ವಾಹನವನ್ನು ತರುವಾಗ ಅವನು, ಅಂಥ ವಾಹನವು ಒಂದು ಸ್ಥಳೀಯ ಪ್ರದೇಶದೊಳಗೆ ಪ್ರವೇಶಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಥವಾ ೧೯೫೮ರ ಮೋಟಾರು ವಾಹನಗಳ ಅಧಿನಿಯಮದ ಅಡಿಯಲ್ಲಿ ಸದರಿ ವಾಹನದ ನೋಂದಣಿಗಾಗಿ ಅರ್ಜಿ ಸಲ್ಲಿಸುವುದಕ್ಕೆ ಮುಂಚೆ–ಇವೆರಡರಲ್ಲಿ ಯಾವುದು ಮುಂಚೆಯೋ ಆ ಅವಧಿಯ ಒಳಗಾಗಿ, ಕಮಿಷನರು ಅಧಿಸೂಚಿಸಬಹುದಾದ ಅಂಥ ಪ್ರಾಧಿಕಾರಕ್ಕೆ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

೪-ಡಿ. ಕೆಲವು ಸನ್ನಿವೇಶಗಳಲ್ಲಿ ತೆರಿಗೆ ವಿನಾಯಿತಿ.— ಯಾವೊಬ್ಬ ವ್ಯಕ್ತಿಯು, ಮೋಟಾರು ವಾಹನವನ್ನು, ಅಂಥ ವಾಹನವು ಮೋಟಾರು ವಾಹನಗಳ ಅಧಿನಿಯಮ, ೧೯೫೮ರ ಅಡಿಯಲ್ಲಿ ಯಾವುದೇ ಕೇಂದ್ರಾಡಳಿತ ಪ್ರದೇಶ ಅಥವಾ ಯಾವುದೇ ಇತರ ರಾಜ್ಯದಲ್ಲಿ ನೋಂದಾಯಿತವಾದ ದಿನಾಂಕದಿಂದ ಹದಿನೈದು ತಿಂಗಳ ಅವಧಿಯೊಳಗಾಗಿ ಒಂದು ಸ್ಥಳೀಯ ಪ್ರದೇಶದೊಳಗೆ ತಂದರೆ ಮತ್ತು ಅಂಥ ಕೇಂದ್ರಾಡಳಿತ ಪ್ರದೇಶ ಅಥವಾ ರಾಜ್ಯದಿಂದ ಈ ರಾಜ್ಯಕ್ಕೆ ಅವನು ತನ್ನ ವಾಸವನ್ನು ಸ್ಥಳಾಂತರಿಸಿದ ಪರಿಣಾಮವಾಗಿ ಅಂಥ ಪ್ರವೇಶವು ಘಟಿಸಿದ್ದರೆ ಕಮಿಷನರು, ರಾಜುಮಾತನ್ನು ಸಲ್ಲಿಸುವುದಕ್ಕೆ ಒಳಪಟ್ಟು ಅಂಥ ವಾಹನದ ಪ್ರವೇಶದ ಮೇಲೆ ಪ್ರವೇಶ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಆ ವ್ಯಕ್ತಿಗೆ ವಿನಾಯಿತಿ ನೀಡಬಹುದು"

೪-ಇ. ನೋಂದಣಿಯಾಗಿ ನಿರ್ಬಂಧಗಳು ಇತ್ಯಾದಿ.— ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಸಹ, ಈ ಅಧಿನಿಯಮದ ಅಡಿಯಲ್ಲಿ ಮೋಟಾರು

ವಾಹನದ ಸಂಬಂಧದಲ್ಲಿ ತೆರಿಗೆ ಸಂದಾಯ ಮಾಡಬೇಕಾದ ಹೊಣೆಗಾರಿಕೆಯು ಉಂಟಾದಲ್ಲಿ ಮತ್ತು ಮೋಟಾರು ವಾಹನ ಅಧಿನಿಯಮ ೧೯೮೮ರ ಅಡಿಯಲ್ಲಿ ರಾಜ್ಯದಲ್ಲಿ ಅಂಥ ಮೋಟಾರು ವಾಹನದ ನೋಂದಣಿ ಮಾಡುವುದು ಅಗತ್ಯವಾಗಿದೆಯೋ ಅಥವಾ ಹೊಸ ನೋಂದಣಿ ಗುರುತನ್ನು ಅದರ ಮೇಲೆ ಹಾಕಬೇಕಾಗಿದೆಯೋ, ಅಂಥ ಮೋಟಾರು ವಾಹನವನ್ನು, ಅಂಥ ಮೋಟಾರು ವಾಹನದ ಸಂಬಂಧದಲ್ಲಿ ಅದಕ್ಕೆ ಸಂಬಂಧಿಸಿದ ವ್ಯಕ್ತಿಯಿಂದ ಅಂಥ ತೆರಿಗೆಯನ್ನು ಸಂದಾಯ ಮಾಡಿದ ಹೊರತು, ಯಾವನೆ ನೋಂದಣಿ ಪ್ರಾಧಿಕಾರಿಯು ನೋಂದಣಿ ಮಾಡತಕ್ಕುದಲ್ಲ ಅಥವಾ ಅಂಥ ಮೋಟಾರು ವಾಹನಕ್ಕೆ ಯಾವುದೇ ಹೊಸ ನೋಂದಣಿ ಗುರುತನ್ನು ಹಾಕತಕ್ಕುದಲ್ಲ"

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾಪಗಳನ್ನು ಕಾರ್ಯಗತಗೊಳಿಸಲು ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಾಗಿ ೧೯೭೫ರ ಕರ್ನಾಟಕ ಸರಕಾರಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಯಿತು.

ಆದುದರಿಂದ ಈ ವಿಧೇಯಕ

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ಹೆಚ್ಚ ತಗಲುವುದಿಲ್ಲ.

ಪ್ರತ್ಯಾಯೋಚಿತ ಶಾಸನ ರಚನಾಧಿಕಾರ ಜ್ಞಾಪನಪತ್ರ

ಖಂಡ-೨ :— ಈ ಖಂಡದ ಮೂಲಕ ಸೇರಿಸಲು ಪ್ರಸ್ತಾವಿಸಲಾದ ೪-ಬಿ ಪ್ರಕರಣದ (೩)ನೇ ಉಪ ಪ್ರಕರಣವು, ಈ ಪ್ರಕರಣದ ಅಡಿಯಲ್ಲಿ ವಿಧಿಸಲಾದ ತೆರಿಗೆಯನ್ನು ಆಮದುಗಾರನು ಸಂದಾಯ ಮಾಡಬೇಕಾದ ರೀತಿ ಮತ್ತು ಅವಧಿಯನ್ನು ಗೊತ್ತುಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರತ್ಯಾಯೋಚಿತ ಶಾಸನ ರಚನಾಧಿಕಾರವು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ಎಂ. ವೀರಪ್ಪ ಮೊಯಿಲಿ
ಮುಖ್ಯಮಂತ್ರಿಯವರು

ನಿಂ. ಹಂ. ಮುತ್ತಲಗೇರಿ
ಕಾರ್ಯದರ್ಶಿ

ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ (ತಿದ್ದುಪಡಿ) ವಿಧೇಯಕ ೧೯೯೩

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ತಿದ್ದುಪಡಿ ವಿಧೇಯಕ ೧೯೯೩ ಅನ್ನು ಹಿಂದಕ್ಕೆ ಪಡೆಯಲು ಅನುಮತಿ ಕೊಡಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಏನೆಂದರೆ :—"ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ (ತಿದ್ದುಪಡಿ) ವಿಧೇಯಕ ೧೯೯೩ ಅನ್ನು ವಾಪಸ್ ಪಡೆಯಲು ಸಭೆ ಅನುಮತಿ ನೀಡುವುದು."